560

14102

# ಪ್ರಥಮ ಸೆಮಿಸ್ಟರ್ ಬಿ.ಬಿ.ಎ./ಬಿ.ಬಿ.ಎ.ಎಂ. ಪರೀಕ್ಷೆ, ಡಿಸೆಂಬರ್ 2018
## (ಸಿ.ಬಿ.ಸಿ.ಎಸ್. ಸ್ಕೀಮ್)
## ಭಾಷಾ ಕನ್ನಡ
## ಕನ್ನಡ ಭಾಷಾ ಪತ್ಯ - I

Time : 3 Hours Max. Marks : 70

I. ಅ) ಈ ಪದ್ಯದ ಭಾವಾರ್ಥವನ್ನು ಬರೆಯಿರಿ. (1×6=6)

ಒಳಗೆ ಕುಟಿಲ, ಹೊರಗೆ ವಿನಯವಾಗಿ
ಭಕ್ತರೆನಿಸಿಕೊಂಬವರನೊಲ್ಲನಯ್ಯಾ
ಲಿಂಗವು ! ಅವರು ಸತ್ಪಥಕ್ಕೆ
ಸಲ್ಲರು ಸಲ್ಲರಯ್ಯ !
ಒಳಹೊರಗೊಂದಾಗದವರಿಗೆ
ಅಳಿಯಾಸೆದೋರಿ ಬೀಸಾಡುವನವರ
ಜಗದೀಶ ಕೂಡಲಸಂಗಮದೇವ

ಆ) ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ. (2×2=4)

1) ಬಸವಣ್ಣ
2) ತುಂಗಭದ್ರೆ
3) ರನ್ನ
4) ಗೋಪಾಲಕೃಷ್ಣ ಅಡಿಗ.

ಇ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. (1×10=10)

1) 'ಸಂಧಿಮಾಳ್ಪುದುತ್ತಮ ಪಕ್ಷಂ' ಎಂದು ಸಂಜಯನು ಹೇಳಲು ಕಾರಣವೇನು ? ಚರ್ಚಿಸಿ.
2) ಅಕ್ಕ ಚನ್ನಮಲ್ಲಿಕಾರ್ಜುನನ ದಿವ್ಯ ಸ್ವರೂಪವನ್ನು ಹೇಗೆ ವರ್ಣಿಸಿದ್ದಾಳೆ ? ವಿವರಿಸಿ.

II. ಅ) ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. (2×5=10)

1) ಅಕ್ಕು ಸಮಾಜದಲ್ಲಿ ತಮಾಷೆಯ ವ್ಯಕ್ತಿಯಾಗಲು ಕಾರಣವೇನು ?
2) ಮಗನನ್ನು ನೋಡಲು ಹೋದ ಉಮ್ಮಾಬಿಗೆ ಆದ ಅನುಭವಗಳೇನು ?
3) ಕಾಳಿಂಗಯ್ಯ ಮತ್ತು ದೇವಪ್ಪನ ನಡುವೆ ಇದ್ದ ವ್ಯಾಜ್ಯಕ್ಕೆ ಕಾರಣಗಳನ್ನು ತಿಳಿಸಿ.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. (1×10=10)

1) ' ನಾಲ್ಕು ಮೊಳ ಭೂಮಿ ' ಕಥೆಯ ಸ್ವಾರಸ್ಯವನ್ನು ಬರೆಯಿರಿ.

2) ರಹಮಾನ್ ರಮೇಶನಾಗಲು ಕಾರಣವೇನು ? ಅದಕ್ಕೆ ಅವನ ತಾಯಿ ಹಾಗೂ ಆಕೆಯ ಸಮುದಾಯದವರು ತೋರಿದ ಪ್ರತಿಕ್ರಿಯೆಯೇನು ? ವಿವರಿಸಿ.

III. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ. (1×5=5)

1) ಗರತಿ ಗಂಗವ್ವ ತ್ಯಾಗಕ್ಕೆ ಸಿದ್ಧವಾದ ಬಗೆ ಹೇಗೆ ?

2) ಪಡುವಳ ಕಾಯಿಯ ತಾಳ್ನು ತಿನ್ನಲು ಸೊಸೆ ಮಾಡಿದ ಉಪಾಯವೇನು ?

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. (1×10=10)

1) ಹಲಗಲಿಯ ಬೇಡರು ತಮ್ಮ ಉಳಿವಿಗಾಗಿ ಹೋರಾಡಿದ ಬಗೆಯನ್ನು ವಿವರಿಸಿ.

2) ಕಾಳಿದೇವತೆಯು ಮೂಗಿನ ಮೇಲೆ ಬೆರಳಿಡಲು ಕಾರಣವೇನು ? ಅದರ ಪರಿಣಾಮವನ್ನು ವಿವರಿಸಿ.

IV. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ. (1×5=5)

1) ವೃತ್ತ ಪತ್ರಿಕಾ ಸ್ವಾತಂತ್ರ್ಯವನ್ನು ಡಿ. ವಿ. ಜಿ. ಯವರು ಹೇಗೆ ಅರ್ಥೈಸುತ್ತಾರೆ ?

2) ಕಪ್ಪು ಗುಲಾಮರಿಗೆ ವಿಧಿಸಿದ್ದ ಕರಾರುಗಳು ಯಾವುವು ?

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. (1×10=10)

1) ಸೆಲ್ವೆಸ್ಟರ್ ಮತ್ತು ರೋಸಾಪಾರ್ಕಳ ಅನುಬಂಧವನ್ನು ವಿವರಿಸಿ.

2) ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಇಂಗ್ಲೀಷ್-ಕನ್ನಡ ಭಾಷೆಗಳಿಗೆ ಕೊಡಬೇಕಾದ ಸ್ಥಾನಮಾನದ ಬಗ್ಗೆ ಕುವೆಂಪುರವರ ನಿಲುವುಗಳನ್ನು ಸ್ಪಷ್ಟಪಡಿಸಿ.

---